# ಸರಯೂ

सरयू

ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363

January Vol. : 10 Issue : 8 5125/ಶೋಭಕೃತ್ ಸಂವತ್ಸರ 2024 ಜನವರಿ ಪುಟ 8 Rs. 10/-

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24




## ಕ್ರೀಡೋತ್ಸವ

09.12.2023

ಭಾಗವಹಿಸಿದ ಗಣ್ಯರು: ಪೂಜ್ಯ ಸದಾಶಿವ ಸ್ವಾಮೀಜಿ, ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಶ್ರೀ ಬಸನಗೌಡ ಪಾಟೀಲ್ ಯತ್ನಾಳ್, ಶ್ರೀ ಎಸ್.ಎಲ್ ಭೋಜೇ ಗೌಡ, ಇಸ್ರೋ ವಿಜ್ಞಾನಿ ಪ್ರೊ. ನಾಗೇಂದ್ರಯ್ಯ, ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಶ್ರೀ ಕೃಷ್ಣ ಪಾಲೆಮಾರ್, ಶ್ರೀ ನಾಗರಾಜ ಶೆಟ್ಟಿ, ಶ್ರೀ ಪ್ರಮೋದ್ ಮಧ್ವರಾಜ್, ಶ್ರೀ ಕೂಳೂರು ಸದಾಶಿವ ಶೆಟ್ಟಿ, ಶ್ರೀ ಜಿತೇಂದ್ರ ಕುಂದೇಶ್ವರ ಹಾಗೂ ದ.ಕ ಮತ್ತು ಉಡುಪಿ ಜಿಲ್ಲೆಯ ಎಲ್ಲಾ ಶಾಸಕರು, ಉದ್ಯಮಿಗಳು, ಹಿತೈಷಿಗಳು ಮತ್ತು ಪಾಲಕರು.














**ಮಾತಾಜಿಯರ ಕಾರ್ಯಾಗಾರ 16.12.2023**

ಶಿಶುಮಂದಿರದ ಮಾತಾಜಿಯರಿಗೆ ಶಿಶುಶಿಕ್ಷಣದ ಕುರಿತು ಮಕ್ಕಳಿಗೆ ಕಲಿಸಬಹುದಾದ ಕಬೀರ ದೋಹಾ, ಸರ್ವಜ್ಞನ ವಚನ, ಅಭಿನಯ ಗೀತೆಗಳ ಕಾರ್ಯಾಗಾರ ನಡೆಯಿತು.

**ಸಾಮೂಹಿಕ ಹುಟ್ಟುಹಬ್ಬ – 29.12.2023**



29 ಮಕ್ಕಳ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಮಕ್ಕಳು ಮತ್ತು ಪಾಲಕರು ಸೇರಿ ರಾಮನಾಮ ಜಪ ಮಾಡಿದರು. ಶ್ರೀಮತಿ ರೂಪಕಲಾ ಮಾತಾಜಿ ಹುಟ್ಟುಹಬ್ಬದ ಮಹತ್ವ ಹಾಗೂ ಸನಾತನ ಸಂಸ್ಕೃತಿಯಲ್ಲಿ ಹೊಸ ವರ್ಷದ ಆಚರಣೆಯ ಬಗ್ಗೆ ತಿಳಿಸಿದರು.

**ಸೇವಾದಿನಾಚರಣೆ 30.12.23**



ಶಿಶುಮಂದಿರದ ಆಡಳಿತ ಸಮಿತಿಯ ಮಾತೆಯರು, ಆಸಕ್ತ ಪಾಲಕರು ಹಾಗೂ ಮಾತಾಜಿಯರು ಸುಧೇಕ್ಕಾರಿನಲ್ಲಿ ಶ್ರಮದಾನ ಮಾಡಿದರು. ಶ್ರೀಮತಿ ಶಾಂತಲಕ್ಷ್ಮಿ ಇವರು ಸೇವಾದಿನದ ಮಹತ್ವ ತಿಳಿಸಿದರು.

**ಹಿರಿಯರೊಂದಿಗೆ ಬೈಠಕ್ 22.12.2023**

ಅಭಿವೃದ್ಧಿ ಸಮಿತಿಯ ಮಾತೆಯರೊಂದಿಗೆ ಮಾತಾಜಿಯರ ಬೈಠಕ್ ಶ್ರೀರಾಮ ವಿದ್ಯಾ-ಕೇಂದ್ರದ ಸಂಸ್ಥಾಪಕರು ಡಾ । ಪ್ರಭಾಕರ್ ಭಟ್ ಕಲ್ಲಡ್ಕ ಮತ್ತು ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ಇವರ ಮಾರ್ಗದರ್ಶನದಲ್ಲಿ ನಡೆಯಿತು.

**ರಂಗಮಂಚ ಕಾರ್ಯಕ್ರಮ 23-12-2023**



ಲವ ತರಗತಿ ಮಕ್ಕಳ ರಂಗಮಂಚ ಕಾರ್ಯಕ್ರಮ ನಡೆಸಲಾಯಿತು.

**ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ : 1.12.2023**



ದ.ಕ ಜಿ. ಪಂ, ಶಾಲಾ ಶಿಕ್ಷಣ ಇಲಾಖೆ ಇವರು ಆಯೋಜಿಸಿದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ 7ನೇ ತರಗತಿಯ ವೈಷ್ಣವಿ ಕಡ್ವ ಆಶುಭಾಷಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ, 6ನೇ ತರಗತಿಯ ನಿನಾದ್ ಕೈರಂಗಳ ಚಿತ್ರಕಲೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

**ರಾಜ್ಯಮಟ್ಟಕ್ಕೆ ಆಯ್ಕೆ : 2.12.2023**

ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ ಶಿರಸಿ, ಶ್ರೀಮದ್ಭಗವದ್ಗೀತಾ ಅಭಿಯಾನ ಸಮಿತಿ ದ.ಕ ಇವರು ಆಯೋಜಿಸಿದ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆಯಲ್ಲಿ 7ನೇ ತರಗತಿಯ ವೈಷ್ಣವಿ ಕಡ್ವ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.

**ಜಿಲ್ಲಾ ಮಟ್ಟಕ್ಕೆ ಆಯ್ಕೆ : 5.12.2023**



ಶಾಂತಿವನ ಟ್ರಸ್ಟ್ ಹಾಗೂ ಸಾ.ಶಿಕ್ಷಣ ಇಲಾಖೆ ಇವರು ಆಯೋಜಿಸಿದ ತಾಲೂಕು ಮಟ್ಟದ ಪ್ರಾರ್ಥನಾ ಶ್ಲೋಕ ಸ್ಪರ್ಧೆಯಲ್ಲಿ 7ನೇ ಧಾತ್ರಿ ಪ್ರಥಮ, ಪ್ರಬಂಧ ಸ್ಪರ್ಧೆಯಲ್ಲಿ 7ನೇ ತ್ರಿಶಾನಿ ಪ್ರಥಮ ಹಾಗೂ 6ನೇ ತರಗತಿಯ ನಿನಾದ್ ಕೈರಂಗಳ ಚಿತ್ರಕಲೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

**ರಾಷ್ಟ್ರಮಟ್ಟದಲ್ಲಿ ಪ್ರಥಮ : 10.12.2023**



ಉತ್ತರಪ್ರದೇಶದ ಗಾಜಿಯಾಬಾದ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಗಣಿತ ಮೇಳದಲ್ಲಿ "ಸಮಬಹುಭುಜಾಕೃತಿಗಳ ಗುಣಧರ್ಮಗಳ ಆಧಾರಿತ ಪ್ರದರ್ಶನ" ಎಂಬ ಗಣಿತ ಮಾದರಿ ಪ್ರದರ್ಶನದಲ್ಲಿ 6ನೇ ತರಗತಿಯ ಭೂಮಿಕಾ ಪ್ರಥಮ ಸ್ಥಾನ ಪಡೆದು-ಕೊಂಡಿದ್ದಾರೆ.

**ರಾಜ್ಯಮಟ್ಟಕ್ಕೆ ಆಯ್ಕೆ : 19.12.2023**



ರಾಜ್ಯ ಬಾಲಭವನ ಸೊಸೈಟಿ ಬೆಂಗಳೂರು, ದ.ಕ ಜಿಲ್ಲಾ ಬಾಲಭವನ ಸಮಿತಿ ಮಂಗಳೂರು ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ದ.ಕ ಇವರು ಏರ್ಪಡಿಸಿದ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ 6ನೇ ತರಗತಿಯ ನಿನಾದ್ ಕೈರಂಗಳ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.

**ಅಭಿನಂಧನಾ ಕಾರ್ಯಕ್ರಮ : 19.12.2023**



ವಿವಿಧ ಕ್ಷೇತ್ರದಲ್ಲಿ ತಾಲೂಕು, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಅಭಿನಂಧನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ। ಕೃಷ್ಣಭಟ್ ಕೊಂಕೋಡಿ. ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀ ಅಚ್ಯುತ್ ನಾಯಕ್, ಶ್ರೀ ಸುಬ್ರಹ್ಮಣ್ಯ ಭಟ್ ಕೆದಿಲ, ಶ್ರೀ ವಸಂತ ಮಾಧವ, ರಮೇಶ್ ಎನ್, ಮಾತೃಸ್ವರೂಪಿಣಿ ಡಾ। ಕಮಲಾ ಪ್ರಭಾಕರ್ ಭಟ್, ವಿದ್ಯಾಕೇಂದ್ರದ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಮಲ್ಲಿಕಾ ಶೆಟ್ಟಿ, ಶ್ರೀಮತಿ ಸುಧಾ ಕಶೆಕೋಡಿ, ಶ್ರೀಮತಿ ಲಕ್ಷ್ಮೀರಘುರಾಜ್ ಮಂಗಳೂರು ಹಾಗೂ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು

**ಗೀತಾ ಜಯಂತಿ: 22.12.2023**

ಶ್ರೀರಾಮ ಪ.ಕಾಲೇಜು ಸಂಸ್ಕೃತ ಭಾಷಾ ಉಪನ್ಯಾಸಕರಾದ ಶ್ರೀಮತಿ ಪ್ರಸನ್ನ ಗೀತಾ ಜಯಂತಿಯ ಮಹತ್ವವನ್ನು ಉದಾಹರಣೆಯೊಂದಿಗೆ ವಿವರಿಸಿದರು. ಅತಿಥಿಗಳು ದೀಪಬೆಳಗಿಸಿ, ಭಗವದ್ಗೀತೆಗೆ ಪುಷ್ಪಾರ್ಚನೆ ಮಾಡಿದರು. ವಿದ್ಯಾರ್ಥಿಗಳು ಭಗವದ್ಗೀತೆಯ 12ನೇ ಅಧ್ಯಾಯವನ್ನು ಪಠಿಸಿದರು.

**ಕಲಿಕೋಪಕರಣ ಕಾರ್ಯಾಗಾರ : 22.12.23**

ಮಾತೃಭಾರತಿ ಸಮಿತಿ ಸದಸ್ಯರ ಸಹಯೋಗದಲ್ಲಿ "ಬಿಸಾಡುವ ವಸ್ತುಗಳಿಂದ ಹಾಗೂ ಚಾರ್ಟ್‌ಗಳಿಂದ ಕಲಿಕೋಪಕರಣಗಳ ತಯಾರಿಕಾ ಕಾರ್ಯಾಗಾರ" ನಡೆಯಿತು. 25 ತಾಯಂದಿರು ಭಾಗವಹಿಸಿದರು.

**ಭಜನೆ-ಸಾಮೂಹಿಕ ಹುಟ್ಟುಹಬ್ಬ : 23.12.2023**

ಮಾಸಿಕ ಭಜನೆ ಹಾಗೂ ಸಾ. ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಶ್ರೀ ಚೆನ್ನಪ್ಪ ಆರ್ ಕೋಟ್ಯಾನ್ ಹಾಗೂ ವಿದ್ಯಾಕೇಂದ್ರದ ಪಿ.ಆರ್.ಓ ಶ್ರೀ ಮನೋಜ್ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು.

**ರಾಜ್ಯ ಮಟ್ಟದಲ್ಲಿ ದ್ವಿತೀಯ : 24.12.2023**



ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ ಶಿರಸಿ, ಶ್ರೀಮದ್ಭಗವದ್ಗೀತಾ ಅಭಿಯಾನ ಸಮಿತಿ ಇವರು ಬೆಳಗಾವಿಯಲ್ಲಿ ಆಯೋಜಿಸಿದ ರಾಜ್ಯ ಮಟ್ಟದ ಭಾಷಣ ಸ್ಪರ್ಧೆಯಲ್ಲಿ 7ನೇ ತರಗತಿಯ ವೈಷ್ಣವಿ ಕಡ್ವ ದ್ವಿತೀಯ ಸ್ಥಾನ ಪಡೆದುಕೊಂಡಿರುತ್ತಾಳೆ.

## ಸುಭಾಷಿತ ಮಂಜರಿ

ಯದಿ ಸತ್ಸಂಗನಿರತೋ ಭವಿಷ್ಯಸಿ ಭವಿಷ್ಯಸಿ ।
ತಥಾ ಸಜ್ಜನಗೋಷ್ಠಿಷು ಪತಿಷ್ಯಸಿ ಪತಿಷ್ಯಸಿ ॥

ಸಜ್ಜನರ ಸಹವಾಸದಲ್ಲಿ ನೀನು ನಿರತನಾದರೆ ಖಂಡಿತವಾಗಿ ಬದುಕುವೆ. ಹಾಗೆಯೇ ಕೆಟ್ಟವರ ಗುಂಪಿನಲ್ಲಿ ಬಿದ್ದರೆ ಖಂಡಿತವಾಗಿ ಬೀಳುತ್ತೀಯೆ.

### ಸಂಪಾದಕೀಯ

ಆತ್ಮೀಯ ಓದುಗರೇ, ಈ ಶೈಕ್ಷಣಿಕ ವರ್ಷದ ಬಹುಮುಖ್ಯ ಕಾರ್ಯಕ್ರಮ ಕ್ರೀಡೋತ್ಸವ ಸಂಪನ್ನಗೊಂಡಿದೆ ಎಂದಿನಂತೆ ಸಹಸ್ರರು ಜನ ಈ ಕಾರ್ಯಕ್ರಮಕ್ಕೆ ಸಾಕ್ಷಿಗಳಾದರು 20 ಕ್ಕೂ ಹೆಚ್ಚು ಪ್ರದರ್ಶನಗಳಲ್ಲಿ ಭಾಗಿಗಳಾದ 3500 ವಿದ್ಯಾರ್ಥಿಗಳ ಅನಿಸಿಕೆಯು ಚೆನ್ನಾಗಿ ಮೂಡಿಬಂದಿದೆ ಎಂಬುದಾಗಿ ಇತ್ತು ಕೇವಲ ಒಂದು ವಾರದ ಅವಧಿಯಲ್ಲಿ ಯಾವುದೇ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದ–ರೆಯಾಗದಂತೆ ಪ್ರದರ್ಶನ ಯೋಜನೆಯಾದದ್ದು ಈ ಬಾರಿಯ ವಿಶೇಷ

ವಿವಿಧ ವಿಭಾಗಗಳಲ್ಲಿ ಡಿಸೆಂಬರ್ ಎಂಬುದು ಪ್ರವಾಸ ಸಾಂಸ್ಕೃತಿಕ ಕ್ರೀಡಾ ಹಾಗೂ ವಾರ್ಷಿಕೋತ್ಸವಗಳಿಗೆ ಮೀಸಲಾದ ತಿಂಗಳೆಂಬುದು ಎಲ್ಲರಿಗೂ ತಿಳಿದ ವಿಚಾರ ಅಂತೆಯೇ ನಮ್ಮಲ್ಲೂ ಈ ತಿಂಗಳಲ್ಲಿ ನಡೆದ ಈ ಎಲ್ಲ ಚಟುವಟಿಕೆಗಳ ವರದಿಯೊಂದಿಗೆ ಈ ಬಾರಿಯ ಸರಯು ನಿಮ್ಮ ಕೈಯಲ್ಲಿದೆ ಓದಿ ಪ್ರತಿಕ್ರಿಯೆ ನೀಡಿ

ವಂದನೆಗಳೊಂದಿಗೆ

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ಮೇಘಶ್ರೀ (ಪ್ರೌಢಶಾಲೆ)
ರಮೇಶ್ (ಪಿಯುಸಿ)
ರಮ್ಯ (ಸೆಕೆಂಡರಿ ಸ್ಕೂಲ್)
ಸಂಧ್ಯಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


**ರಾಷ್ಟ್ರೀಯ ಗಣಿತ ದಿನ : 22.12.2023**

ಪದವಿ ಕಾಲೇಜಿನ ಕಂಪ್ಯೂಟರ್ ಸೈನ್ಸ್ ಉಪನ್ಯಾಸರಾದ ಶ್ರೀಮತಿ ಸುಧಾ ದಿನದ ಮಹತ್ವವನ್ನು ತಿಳಿಸಿಕೊಟ್ಟರು. 7ನೇ ತರಗತಿಯ ಶರಣ್ಯ ಗಣಿತಕ್ಕೆ ಸಂಬಂಧಿಸಿದ ಹಾಡನ್ನು ಹಾಡಿದರು. ಉಪನ್ಯಾಸಕರಾದ ಶ್ರೀಮತಿ ಪ್ರಸನ್ನ ಹಾಗೂ ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿ : 25.12.2023**





ಸೇವಾಂಜಲಿ ಪ್ರತಿಷ್ಠಾನ ಪರಂಗಿಪೇಟೆ ಇದರ ವತಿಯಿಂದ ನಡೆದ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಕಿರಿಯ ವಿಭಾಗದಲ್ಲಿ 3ನೇ ತರಗತಿಯ ನಿಹಾರಿಕ ಎಂ ಪ್ರಥಮ ಸ್ಥಾನ, ಹಿರಿಯ ವಿಭಾಗದಲ್ಲಿ 6ನೇ ತರಗತಿಯ ನಿನಾದ್ ಕೈರಂಗಳ ದ್ವಿತೀಯ ಸ್ಥಾನ ಪಡೆದುಕೊಂಡಿರುತ್ತಾರೆ.

**ರಾಮನಾಮ ತಾರಕ ಜಪಯಜ್ಞ 26.12.2023:** ಶ್ರೀರಾಮ ಮಂದಿರದಲ್ಲಿ ನಡೆಯುಲಿರುವ ಶ್ರೀ ವಿದ್ಯಾಗಣಪತಿ ಪ್ರತಿಷ್ಠೆ ಹಾಗೂ 13 ಕೋಟಿ ರಾಮನಾಮ ತಾರಕ ಜಪಯಜ್ಞದ ಅಂಗವಾಗಿ ವೇದವ್ಯಾಸ ಧ್ಯಾನಮಂದಿರದಲ್ಲಿ ರಾಮನಾಮ ಸ್ಮರಣೆಯ ಪಠಣಕ್ಕೆ ಚಾಲನೆ ನೀಡಲಾಯಿತು. ಆಡಳಿತ ಮಂಡಳಿ ಸದಸ್ಯರಾದ ಕಶೆಕೋಡಿ ಸೂರ್ಯನಾರಾಯಣ ಭಟ್ ರಾಮನಾಮ ತಾರಕ ಜಪದ ಮಹತ್ವವನ್ನು ತಿಳಿಸಿಕೊಟ್ಟರು. ವೇದಿಕೆಯಲ್ಲಿ ಶ್ರೀರಾಮ ಮಂದಿರದ ಶ್ರೀ ಕ.ಕೃಷ್ಣಪ್ಪ ಹಾಗೂ ಶ್ರೀ ಸುಜಿತ್ ಕೊಟ್ಟಾರಿ ಹಾಗೂ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

27.12.2023ರಂದು ಶ್ರೀರಾಮ ಮಂದಿರದ ಶ್ರೀ ಡೊಂಬಯ್ಯ ಹಾಗೂ ಅವರ ಧರ್ಮಪತ್ನಿ, 28.12.2023 : ಶ್ರೀ ಗೋಪಾಲ್ ಶೆಣೈ ದಂಪತಿಗಳು ಹಾಗೂ ಶ್ರೀಮತಿ ಸತ್ಯವತಿ, 29.12.2023 : ಹಿರಿಯ ವಿದ್ಯಾರ್ಥಿ ಹಾಗೂ ಪೋಷಕರು ಆಗಿರುವಂತಹ ಶ್ರೀ ಜಯರಾಮ ದಂಪತಿಗಳು ಉಪಸ್ಥಿತರಿದ್ದು ಶ್ರೀರಾಮ ನಾಮ ತಾರಕ ಜಪ ಮಾಡಿದರು.

**ರಾಷ್ಟ್ರಮಟ್ಟದ ಗಣಿತ – ವಿಜ್ಞಾನ ಮೇಳದಲ್ಲಿ ಭಾಗಿ**

ಗಾಜಿಯಾಬಾದ್ ಹಾಗೂ ಮಥುರಾದಲ್ಲಿ ನಡೆದ ರಾಷ್ಟ್ರಮಟ್ಟದ ಗಣಿತ ಮಾದರಿ, "ಕ್ಷೇತ್ರಫಲ ಹಾಗೂ ಆಯತದ ಮಿತಿಯನ್ನು ಸ್ಪಷ್ಟಗೊಳಿಸುವ ಪ್ರದರ್ಶನ" ಎಂಬ ವಿಷಯದಲ್ಲಿ 6ನೇ ತರಗತಿಯ ರಾಜೇಶ್ವರಿ ಭಟ್ ಹಾಗೂ ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ 7ನೇ ತರಗತಿಯ ಪ್ರಜ್ಞಾ, ಸಾನ್ವಿ ಕಾಮತ್, ವೈಷ್ಣವಿ ಕದ್ಯ ಭಾಗವಹಿಸಿರುತ್ತಾರೆ.

**ನಾರಿ ಶಕ್ತಿ ಸಂಗಮ: 3.12.2023**

ಪುತ್ತೂರಿನ ವಿವೇಕಾನಂದ ಆಂಗ್ಲಮಾಧ್ಯಮ ಶಾಲೆಯಲ್ಲಿ ನಡೆದ ನಾರಿಶಕ್ತಿ ಸಂಗಮ ಕಾರ್ಯಕ್ರಮದಲ್ಲಿ ಪ್ರಾಥಮಿಕ ವಿಭಾಗದ ಅಧ್ಯಾಪಕರು ಭಾಗವಹಿಸಿದರು.

**ವರ್ತುಲ ಸಭೆ: 30.12.2023**



ಶ್ರೀರಾಮ ವರ್ತುಲ ಶೈಕ್ಷಣಿಕ ಕಾರ್ಯಾಗಾರ" ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆಯಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವೇದಿಕೆಯಲ್ಲಿ, ಮಾಜಿ ಜಿ.ಪಂ. ಸದಸ್ಯರಾದ ಶ್ರೀ ಚೆನ್ನಪ್ಪ ಆರ್ ಕೋಟ್ಯಾನ್, ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಶ್ರೀ ಗೋಪಾಲ ಎಂ, ಪುಣಚ ಶ್ರೀದೇವಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಶ್ರೀಮತಿ ರಜನಿ, ಶ್ರೀರಾಮ ವರ್ತುಲ ಕಾರ್ಯಗಾರದ ಸಂಯೋಜ–ಕರಾದ ಶ್ರೀ ವಿನೋದ್ ಶೆಟ್ಟಿ ಎ, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.


ಸಂಪನ್ಮೂಲ ವ್ಯಕ್ತಿಯಾಗಿ ಕೇಪು ಸ.ಪ್ರೌಢ ಶಾಲೆ ಕಲ್ಲಂಗಳ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ರಮೇಶ್ ಬಾಯಾರು, ಇವರು "ವಿದ್ಯಾರ್ಥಿ – ಶಿಕ್ಷಕ – ಸಮಾಜ", ಕಡಬ ತಾಲೂಕಿನ ಪ್ರಥಮ ಮನ:ಶಾಸ್ತ್ರಜ್ಞರಾದ ಶ್ರೀಮತಿ ಶ್ರದ್ಧಾ ಲಲಿತ್ ರೈ, ಇವರು "ಅನಪೇಕ್ಷಿತ ವರ್ತನೆ ಮತ್ತು ಪರಿಹಾರ", ಮೂರನೇಯ ಅವಧಿಯಲ್ಲಿ "ವರ್ತಮಾನದ ವಿಷಮತೆಗಳು" ಎಂಬ ವಿಷಯದ ಕುರಿತು, ಶ್ರೀ ಸುಬ್ರಮಣ್ಯೇಶ್ವರ ಪ. ಪೂ. ಕಾಲೇಜಿನ ಸಂಸ್ಕೃತ ಉಪನ್ಯಾಸಕರಾದ ರಾ.ಸ್ವ.ಸಂಘದ ಉಜಿರೆ ತಾಲೂಕು ಕಾರ್ಯವಾಹ ಆಗಿರುವ ಶ್ರೀಯುತ ಪ್ರಜ್ವಲ್ ಇವರು ತಿಳಿಸಿಕೊಟ್ಟರು. ಸಮಾರೋಪದಲ್ಲಿ ವಿ.ವಿ.ಸಂಘದ ಕೋಶಾಧಿಕಾರಿಯಾದ ಶ್ರೀ ಅಚ್ಯುತ್ ನಾಯಕ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಸಾಲ್ಯಾನ್, ಸೆಕೆಂಡರಿ ಸ್ಕೂಲ್ ಉಪಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್, ಪುಣಚ ಶ್ರೀದೇವಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಲೋಕೇಶ್, ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

## ಪ್ರೌಢಶಾಲೆ

**ಸಾಂಸ್ಕೃತಿಕ ಉತ್ಸವದಲ್ಲಿ ಪ್ರಶಸ್ತಿ**

ಶಾರದಾ ಗಣಪತಿ ವಿದ್ಯಾಕೇಂದ್ರ ಪುಣ್ಯಕೋಟಿ ನಗರ ಕೈರಂಗಳದಲ್ಲಿ ನಡೆದ ಸಾಹಿತ್ಯ ಸಾಂಸ್ಕೃತಿಕ ಉತ್ಸವದ ಸ್ಪರ್ಧೆಗಳಲ್ಲಿ ಭಾರತದ ದರ್ಶನ– ಆಕಾಶ 10 ಆಜಾದ್, ಸಾಹಿತಿಕ ರಸಪ್ರಶ್ನೆ–ಭೂಷಣ ದುರ್ಗಾಶರಣ್ 10 ಆಜಾದ್ ಪ್ರಥಮ ಸ್ಥಾನ, 10ನೇ ತರಗತಿಯ ಗಗನ ಕವನ, ಕಾವ್ಯ ವಾಚನ, ಅನುಷ, ಚಿಂತನ, ದೀಕ್ಷ, ಶ್ರದ್ಧಾ, ರಕ್ಷಿತಾ ದೇಶಭಕ್ತಿ ಗೀತೆ, ಮೋನಿಷಾ ಕವಿಗೋಷ್ಠಿ, ದೀಕ್ಷಾ ಮೆಚ್ಚುಗೆಯ ಪಾತ್ರ ಹಾಗೂ 8ನೇ ತರಗತಿಯ ಮೋನಿಷಾ ಪಾತ್ರ ನಿರೂಪಣೆ ದ್ವಿತೀಯ ಸ್ಥಾನ.

# ಕ್ರೀಡೋತ್ಸವ 2023 ಚಿತ್ರ ಸಂಚಯ




ಸಂಚಲನ





ಶಿಶುನೃತ್ಯ





ಘೋಷ್



ದೀಪಾರತಿ





ಜಡೆಕೋಲಾಟ







ಪ್ರಾಥಮಿಕ
ಸಾಮೂಹಿಕ





ನೃತ್ಯ ಭಜನೆ





ಟಿಕ್ ಟಿಕ್




ಮಲ್ಲಕಂಬ



# ಕ್ರೀಡೋತ್ಸವ 2023 ಚಿತ್ರ ಸಂಚಯ



**ರಾಷ್ಟ್ರೀಯ ಮತದಾರರ ದಿನಾಚರಣೆ 3-12-2023**

ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ಶ್ರೀ ಶಾರದಾ ಪ್ರೌಢಶಾಲೆ ಪಾಣೆಮಂಗಳೂರು ನಲ್ಲಿ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿ ಭೂಷಣ್ ಮತ್ತು ದುರ್ಗಾಶರಣ್ ದ್ವಿತೀಯ ಸ್ಥಾನವನ್ನು ಮತ್ತು ಶ್ರೀವಿದ್ಯಾ ಪ್ರಬಂಧ ಸ್ಪರ್ಧೆಯಲ್ಲಿ ಮತ್ತು ಚೈತ್ರಲಕ್ಷ್ಮಿ ಚಿತ್ರ ರಚನೆಯಲ್ಲಿ ಭಾಗವಹಿಸಿರುತ್ತಾರೆ.

**ಪ್ರತಿಭಾ ಪ್ರದರ್ಶನ :16-12-2023**

2023-24ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನದ ನೋಟಗಳು

**ಚಿಕಿತ್ಸಾ ನೆರವು :19-12-2023**




9ನೇ ತರಗತಿಯಲ್ಲಿ ಓದುತ್ತಿರುವ ಬಂಟ್ವಾಳ ತಾಲೂಕಿನ ಕೆದಿಲ ಗ್ರಾಮದ ಶ್ರೀಮತಿ ನಳಿನಿ ಇವರ ಪುತ್ರಿ ಕು. ಕಾವ್ಯ ಎಂಬ ಹುಡುಗಿ SLE ಎಂಬ ಮಾರಕ ಕಾಯಿಲೆಯಿಂದ ಬಳಲುತ್ತಿದ್ದು ಅವಳಿಗೆ ಚಿಕಿತ್ಸಾ ವೆಚ್ಚವಾಗಿ ವಿದ್ಯಾಕೇಂದ್ರದ ವಿದ್ಯಾರ್ಥಿಗಳಿಂದ ಸಂಗ್ರಹವಾದ ರೂ. 2 ಲಕ್ಷದ ಚೆಕ್‌ನ್ನು ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಇವರು ಕುಮಾರಿ ಕಾವ್ಯ ಇವರಿಗೆ ನೀಡಿದರು. ಈ ಸಂದರ್ಭದಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ, ಡಾ. ಕೊಂಕೋಡಿ ಕೃಷ್ಣ ಭಟ್, ಕೋಶಾಧಿಕಾರಿ ಅಚ್ಯುತ ನಾಯಕ್, ವಿವೇಕಾನಂದ ಕನ್ನಡ ಮಾಧ್ಯಮದ ಆಡಳಿತ ಮಂಡಳಿ ಸದಸ್ಯರಾಗಿರುವ ಸುಬ್ರಹ್ಮಣ್ಯ ಭಟ್ ಕೆದಿಲ, ಡಾ.ಕಮಲಾ ಪ್ರಭಾಕರ ಭಟ್, ಸಂಚಾಲಕರಾದ ಶ್ರೀ ವಸಂತ ಮಾಧವ, ಸಹ ಸಂಚಾಲಕರಾದ ರಮೇಶ ಎನ್, ಪ್ರೌಢಶಾಲಾ ಶಿಕ್ಷಣ ಪರಿವೀಕ್ಷಕರಾದ ಶ್ರೀಮತಿ ಲಕ್ಷ್ಮಿ ರಘುರಾಜ್, ಶ್ರೀಮತಿ ಸುಧಾ ಸೂರ್ಯನಾರಾಯಣ ಭಟ್ ಉಪಸ್ಥಿತರಿದ್ದರು.

**NCC ಘಟಕ ತರಬೇತಿ.** 20.12.23



ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕ ಇದರ NCC ಘಟಕ ಸಿಬ್ಬಂದಿಗಳಾದ k. M ರಾವ್ ಮತ್ತು ಸತ್ಯಂ ದುಬೆ N.C.Cಯ ಉದ್ದೇಶ ಮತ್ತು ಸದುಪಯೋಗ, ಡ್ರಿಲ್ ಇದರ ಬಗ್ಗೆ ತಿಳಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಉಪಸ್ಥಿತರಿದ್ದರು. ಶಾ.ಶಿ.ಶಿಕ್ಷಕರಾದ ಶ್ರೀ ಪುರುಷೋತ್ತಮ ಕಾರ್ಯಕ್ರಮವನ್ನು ಸಂಯೋಜಿಸಿದರು.

**ಅತಿಥಿಗಳ ಭೇಟಿ 23.12.2023**



ಸರಸ್ವತಿ ವಂದನಾದಲ್ಲಿ ಶ್ರೀ ದುರ್ಗಾಪರಮೇಶ್ವರ್ (ಶುಭಂ ಕರೋತಿ ಸಂಸ್ಥೆಯ ಕಾರ್ಯದರ್ಶಿ, ಸಮಗ್ರ ವ್ಯಕ್ತಿತ್ವ ವಿಕಸನ ತರಬೇತುದಾರರು, ಬೆಂಗಳೂರಿನ ಪ್ರೆಸಿಡೆನ್ಸಿ ಅಕಾಡೆಮಿಯ ಕಾರ್ಯದರ್ಶಿಗಳು) ಮತ್ತು ಅವರ ಶ್ರೀಮತಿ ಅರ್ಪಿತ ಉಪಸ್ಥಿತರಿದ್ದರು. ಅವರೊಂದಿಗೆ ಪಿ.ಆರ್.ಓ ಮನೋಜ್ ಉಳ್ಳಾಲ್ ಹಾಗೂ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

**ಶ್ರೀರಾಮ ತಾರಕ ಜಪಯಜ್ಞ 26-12-2023**

ಶ್ರೀರಾಮ ತಾರಕ ಜಪ ಯಜ್ಞಕ್ಕೆ ಸಂಬಂಧಿಸಿ ವಿದ್ಯಾರ್ಥಿಗಳಿಗೆ ಶ್ರೀರಾಮ ನಾಮ ಜಪದ ದೀಕ್ಷೆಯನ್ನು ವಿದ್ಯಾಕೇಂದ್ರದ ಆಡಳಿತ ಮಂಡಳಿ ಸದಸ್ಯರಾಗಿರುವ ಶ್ರೀ ಸೂರ್ಯ ನಾರಾಯಣ ಭಟ್ ಕಶೆಕೋಡಿ ಇವರು ನೀಡಿದರು. ವೇದಿಕೆಯಲ್ಲಿ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

## ಪದವಿಪೂರ್ವ

**ವೈದ್ಯಕೀಯ ಪರೀಕ್ಷೆ 11.12.2023**



ಕರ್ನಾಟಕ ಸರ್ಕಾರ, ಜಿಲ್ಲಾಡಳಿತ ಜಿಲ್ಲಾ ಪಂ., ಜಿ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಾಲಾ ಶಿಕ್ಷಣ ಇಲಾಖೆ ಹಾಗೂ ಪ.ಪೂ. ಶಿಕ್ಷಣ ಇಲಾಖೆ ದ.ಕ ಜಿಲ್ಲೆ ಮಂಗಳೂರು, ಅನಿಮಿಯ ಮುಕ್ತ ಪೌಷ್ಟಿಕ ಕರ್ನಾಟಕ (AMPK) ಕಾರ್ಯಕ್ರಮದ ಅಡಿಯಲ್ಲಿ ಮಕ್ಕಳ ರಕ್ತಹೀನತೆ ತಪಾಸಣೆ ಮತ್ತು ಚಿಕಿತ್ಸೆ.

**ರಾಷ್ಟ್ರಮಟ್ಟದ ಸಂಸ್ಕೃತಿ ಜ್ಞಾನ ರಸಪ್ರಶ್ನೆ ಸ್ಪರ್ಧೆ**

03.12.2023 ರಿಂದ 10.12.2023ರವರೆಗೆ ಮಥುರಾದಲ್ಲಿ ನಡೆದ ವಿದ್ಯಾಭಾರತಿಯ ರಾಷ್ಟ್ರಮಟ್ಟದಸಂಸ್ಕೃತಿ ಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರಥಮ ವಿಜ್ಞಾನ ವಿಭಾಗದ ಶ್ರೀನಿವಾಸ ನಾಯಕ್, ದೀಕ್ಷಿತ್ ಮತ್ತು ತುಷಾರ್ ಭಾಗವಹಿಸಿರುತ್ತಾರೆ.

**ಕುಟುಂಬ ಪ್ರಬೋಧನ್ 13.12.2023**

ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇವರು ನಡೆಸಿದ ಕುಟುಂಬ ಪ್ರಬೋಧನೆದ ಪ್ರಶಿಕ್ಷಣವರ್ಗದಲ್ಲಿ ಶ್ರೀ ರಮೇಶ್ ಶ್ರೀಮಾನ್ ಭಾಗವಹಿದರು.

**ವೃತ್ತಿ ಮಾರ್ಗದರ್ಶನ 22.12.2023**

ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ನಿಟ್ಟೆ ವಿದ್ಯಾಸಂಸ್ಥೆಯ ಕುಶಲತಾ ರವರು ವೃತ್ತಿ ಮಾರ್ಗದರ್ಶನ ನೀಡಿದರು.


**ವೃತ್ತಿ ಮಾರ್ಗದರ್ಶನ 23.12.2023**

ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ವಿವೇಕಾನಂದ ಇಂಜಿನಿಯರಿಂಗ್ ಕಾಲೇಜು ಪುತ್ತೂರು ಇಲ್ಲಿ ಉಪನ್ಯಾಸಕರಾದ ವಂದನಾಶಂಕರ್ ಮತ್ತು ಶ್ರೀ ಚೇತನ್ ರವರು ವೃತ್ತಿ ಮಾರ್ಗದರ್ಶನ ನೀಡಿದರು.

**ಶ್ರೀರಾಮ ನಾಮ ಜಪದ ದೀಕ್ಷೆ 22.12.23**

ಶ್ರೀ ಕಶೆಕೋಡಿ ಸೂರ್ಯನಾರಾಯಣ ಭಟ್ ಇವರು ಶ್ರೀರಾಮ ಪದವಿಪೂರ್ವ ಮತ್ತು ಸೆಕೆಂಡರಿ ಸ್ಕೂಲ್ ನ ವಿದ್ಯಾರ್ಥಿಗಳಿಗೆ ಅಯೋಧ್ಯೆ ಶ್ರೀರಾಮ ಮಂದಿರ ಮತ್ತು ಶ್ರೀರಾಮ ಮಂದಿರ ಕಲ್ಲಡ್ಕದ ಹಿನ್ನಲೆಯ ಬಗ್ಗೆ ತಿಳಿಸಿ ಶ್ರೀರಾಮ ನಾಮ ಜಪದ ದೀಕ್ಷೆಯನ್ನು ನೀಡಿದರು.

**ಸೈಬರ್ ಕ್ರೈಮ್ ಬಗ್ಗೆ ಮಾಹಿತಿ 19.12.23**



ಪ.ಪೂ. ವಿಭಾಗದಲ್ಲಿ ಶ್ರೀ. ಮಂಜುನಾಥ್. ಟಿ, ಪೋಲೀಸ್ ಸಬ್ ಇನ್ ಸ್ಪೆಕ್ಟರ್ ಮಂಗಳೂರು ಇವರು ಸೈಬರ್ ಕ್ರೈಮ್ ಬಗ್ಗೆ ಮಾಹಿತಿ ನೀಡಿದರು.

**ಯಕ್ಷಗಾನ 23.12.2023**



ಭರತ ವಿದ್ಯಾರ್ಥಿ ಸಂಘದ ವತಿಯಿಂದ ಪದವಿಪೂರ್ವ ವಿದ್ಯಾರ್ಥಿಗಳು ಮತ್ತು ಹಿರಿಯ ವಿದ್ಯಾರ್ಥಿಗಳು *ಶ್ರೀ ಕೃಷ್ಣ ದರ್ಶನ*, "*ಕಂಸ ವಧೆ ಸುಧನ್ವ ಮೋಕ್ಷ* ಎಂಬ ಯಕ್ಷಗಾನ ಪ್ರಸಂಗವನ್ನು ನಡೆಸಿಕೊಟ್ಟರು ಹಿಮ್ಮೇಳದಲ್ಲಿ ಭಾಗವತರಾಗಿ ಶ್ರೀಯುತ ಪ್ರಖ್ಯಾತ್ ಶೆಟ್ಟಿ ಅಳಿಕೆ, ಕುಮಾರಿ ಆಶ್ರಿತ ದ್ವಿತೀಯ ವಾಣಿಜ್ಯ ವಿಭಾಗ, ಚೆಂಡೆ - ಶ್ರೀಯುತ ಚಂದ್ರಶೇಖರ್ ಭಟ್ ಕೊಂಕಣಾಜೆ, ಮದ್ದಳೆ -ಶ್ರೀ ಶ್ರೀವತ್ಸ ಸೋಮಯಾಜಿ, ಚಕ್ರತಾಳ-ಶ್ರೀ ಅನ್ವೇಷ ಆರ್ ಶೆಟ್ಟಿ ಸಹಕರಿಸಿದರು, ಕಾರ್ಯಕ್ರಮದಲ್ಲಿ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀಮತಿ ಡಾ। ಕಮಲಾ ಪ್ರಭಾಕರ್ ಭಟ್, ಪ್ರಾಚಾರ್ಯರಾದ ಶ್ರೀ ವಸಂತ ಬಲ್ಲಾಳ್, ಹಾಗೂ ಎಲ್ಲಾ ಉಪನ್ಯಾಸಕರು ಮತ್ತು ಉಪನ್ಯಾಸಕೇತರರು ಉಪಸ್ಥಿತರಿದ್ದರು. ಭರತೆ ವಿದ್ಯಾರ್ಥಿ ಸಂಘದ ನಿರ್ದೇಶಕಿ ಶ್ರೀಮತಿ ಶೋಭಾ ಮಾತಾಜಿ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು

**"ನಾರೀ ಶಕ್ತಿ ಸಂಗಮ" 03-12-2023**

ಕೇಶವ ಸ್ಮೃತಿ ಸಂವರ್ಧನ ಸಮಿತಿ (ರಿ) ಯೋಜಿತ ಪುತ್ತೂರು ಜಿಲ್ಲೆ ವತಿಯಿಂದ ನಡೆದ "ನಾರೀ ಶಕ್ತಿ ಸಂಗಮ" ಮಹಿಳಾ ಸಮ್ಮೇಳನದಲ್ಲಿ ಪದವಿ ವಿಭಾಗದಿಂದ ಶ್ರೀಮತಿ ಶ್ರೀದೇವಿ ಮಾತಾಜಿ, ಶ್ರೀಮತಿ ಸಹನಾ ಮಾತಾಜಿ, ಕುಸಂಧ್ಯಾ ಮಾತಾಜಿ, ಶ್ರೀಮತಿ ಪ್ರಸನ್ನ ಮಾತಾಜಿ, ಶ್ರೀಮತಿ ಕಾವ್ಯಶ್ರೀ ಮಾತಾಜಿ, ಕುರಕ್ಷಾ ಮಾತಾಜಿ, ಕುರಚನ ಮಾತಾಜಿ, ಕುಪ್ರಜ್ಞಾ ಮಾತಾಜಿ, ಕುಶಿಲ್ಪ ಮಾತಾಜಿ ಭಾಗವಹಿಸಿರುತ್ತಾರೆ.

**4.12.23 ರಿಂದ 06.12.23ರವರೆಗೆ ATHLETIC CHAMPIONSHIP- 2023-2024**

ಉಡುಪಿ ಅಜ್ಜರಕಾಡು ಸ್ಟೇಡಿಯಂನಲ್ಲಿ ನಡೆದ 2023-2024ನೇ ಸಾಲಿನ ATHLETIC CHAMPIONSHIP ನಲ್ಲಿ 8 ವಿದ್ಯಾರ್ಥಿಗಳಾದ ಶಶಾಂಕ್ ಕುಮಾರ್ ಶೆಟ್ಟಿ (ದ್ವಿತೀಯ ಬಿ.ಸಿ.ಎ), ವಿಘ್ನೇಶ್ (ದ್ವಿತೀಯ ಬಿ.ಸಿ.ಎ, ಹರ್ಷಿತ್ ಗಟ್ಟಿ (ಪ್ರಥಮ ಬಿ.ಸಿ.ಎ), ಕಾರ್ತಿಕ್ ಸಿ.ಆರ್.(ದ್ವಿತೀಯ ಬಿ.ಸಿ.ಎ). ರೋಹಿತ್ (ಪ್ರಥಮ ಬಿ.ಕಾಂ.), ಮಂಜುನಾಥ್ (ಪ್ರಥಮ ಬಿ.ಕಾಂ, ಜಿತೇಂದ್ರ (ಪ್ರಥಮ ಬಿ.ಎ), ಕಾರ್ತಿಕ್ (ಪ್ರಥಮ ಬಿ.ಸಿ.ಎ) ಭಾಗವಹಿಸಿರುತ್ತಾರೆ. ಇಂಗ್ಲೀಷ್ ಉಪನ್ಯಾಸಕರಾದ ಶ್ರೀ. ಧನಂಜಯ್ ಶ್ರೀಮಾನ್ ಇವರು ತಂಡದ ವ್ಯವಸ್ಥಾಪಕರಾಗಿ ಉಪಸ್ಥಿತರಿದ್ದರು.

**ಪ್ರಬಂಧ ಸ್ಪರ್ಧೆ ಪ್ರಮಾಣಪತ್ರ 05.12.2023**

ಶ್ರೀ ಸತ್ಯ ಸಾಯಿ ಸೇವಾ ಸಮಿತಿ, ಬಂಟ್ವಾಳ ದ.ಕ ಇವರು "ಭಾರತವು ಹಳ್ಳಿಯಲ್ಲಿ ವಾಸಿಸುತದೆ" ಎಂಬ ವಿಷಯದ ಕುರಿತು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಕಾಲೇಜು ಮಟ್ಟ ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಿದ್ದರು. ಆ ಸ್ಪರ್ಧೆಯಲ್ಲಿ ವಿಜೇತರಾದ ಹಾಗೂ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಶ್ರೀ ಸತ್ಯ ಸಾಯಿ ಸೇವಾ ಸಮಿತಿ ಬಂಟ್ವಾಳ ದ.ಕ. ಜಿಲ್ಲಾ ಶಿಕ್ಷಣ ಸಂಯೋಜಕರಾದ ಶ್ರೀಮತಿ ಮುಕಾಂಬಿಕಾ ಎಸ್. ರಾವ್ ಇವರು ಆಗಮಿಸಿ, ಪ್ರಮಾಣಪತ್ರ ನೀಡಿ ಅಭಿನಂದಿಸಿದರು.

**ಅಭಾವಿಪ ಅಮೃತಮಹೋತ್ಸವದಲ್ಲಿ ಭಾಗಿ**

ದಿನಾಂಕ 07-12-23ರಿಂದ 10-12-23ರವರೆಗೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಅಮೃತ ಮಹೋತ್ಸವ ಅಂಗವಾಗಿ 69ನೇ ರಾಷ್ಟ್ರೀಯ ಅಧಿವೇಶನವು ದೆಹಲಿಯ ಇಂದ್ರಪ್ರಸ್ಥ ನಗರದಲ್ಲಿ ನಡೆಯಿತು. ಈಅಧಿವೇಶನವನ್ನು ಭಾರತದ ಗೃಹ ಸಚಿವರಾದ ಅಮಿತ್ ಶಾ ಇವರು ಉದ್ಘಾಟಿಸಿದರು. ಈ ಅಧಿವೇಶನದಲ್ಲಿ ವಿದ್ಯಾರ್ಥಿನಿ ಕು। ಸ್ವಾತಿಲಕ್ಷ್ಮೀ (ದ್ವಿತೀಯ ಬಿ.ಸಿ.ಎ) ಇವರು ಎಬಿವಿಪಿ ಪ್ರತಿನಿಧಿಯಾಗಿ ಭಾಗವಹಿಸಿರುತ್ತಾರೆ.

**ಸಹಾಯಧನ 14.12.2023**

ಪ್ರೌಢಶಾಲಾ ವಿಭಾಗದ ಒಂಭತ್ತನೆಯ ತರಗತಿಯ ವಿದ್ಯಾರ್ಥಿನಿಯಾದ ಕು. ಕಾವ್ಯ ಇವರು SLE ಎಂಬ ಮಾರಕ ರೋಗದಿಂದ ಬಳಲುತ್ತಿದ್ದು ಕಾಲೇಜಿನ ಉಪನ್ಯಾಸಕ ಹಾಗೂ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಮೊತ್ತವನ್ನು ಶಾಲೆಯ ಮುಖ್ಯೋಪಾಧ್ಯಾಯರಿಗೆ ಹಸ್ತಾಂತರಿಸಲಾಯಿತು.

**ಅಂತರ್ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 18.12.2023**

ಕೆನರಾ ಕಾಲೇಜು ಮಂಗಳೂರು ಇಲ್ಲಿ ನಡೆದ ಮಂಗಳೂರು ವಿ.ವಿ. ಅಂತರ ಕಾಲೇಜು ಮಟ್ಟದ ಜಾನಪದ ನೃತ್ಯ ಸ್ಪರ್ಧೆಯಲ್ಲಿ ಪ್ರತೀಕ ಯಸ್, ಸ್ವರ್ಣ ಲಕ್ಷ್ಮಿ, ಪ್ರತೀಕ್ಷಾ, ದೀಪಾ ಯಂ , ಮೋಕ್ಷಿತ, ಪೂಜಾಶ್ರೀ, ನಿಶ್ಮಿತಾ, ಚೈತ್ರ. ಪಿ, ಸಿಂಚನ ಡಿ, ಲಕ್ಷಿತ ಅಂತಿಮ ಬಿಕಾಂ ಹಾಗೂ ಭರತನಾಟ್ಯ ಸ್ಪರ್ಧೆಯಲ್ಲಿ ಧನುಶ್ರೀ ಪ್ರಥಮ ವಾಣಿಜ್ಯ ವಿಭಾಗ ಇವರು ಭಾಗವಹಿಸಿದ್ದು, ಸಹಾಯಕರಾಗಿ ಮನ್ವಿತಾ, ವಿಸ್ಮಿತಾ, ಧನ್ಯ, ರಕ್ಷಿತಾ, ದಿವ್ಯಾ ದ್ವಿತೀಯ ಬಿಕಾಂ, ಗೀತೇಶ್ ದ್ವಿತೀಯ ಬಿ ಎ ಇವರು ಭಾಗವಹಿಸಿದ್ದರು. ಕನ್ನಡ ಪ್ರಾಧ್ಯಾಪಕರಾದ ಶ್ರೀಮತಿ ರಶ್ಮಿತಾ ಜೊತೆಗಿದ್ದರು

**"ಭಾಷಾ ಅನೇಕ್, ಭಾವ ಏಕ್" 15.12.23**




ತಮಿಳ್ನಾಡಿನ ಪ್ರಸಿದ್ಧ ಕವಿ ಶ್ರೀ ಸುಬ್ರಹ್ಮಣ್ಯ ಭಾರತೀಯವರ ಜನ್ಮದಿನದ ಅಂಗವಾಗಿ ಆಚರಿಸುವ ಭಾರತೀಯ ಭಾಷಾ ದಿವಸ್ ಪ್ರಯುಕ್ತ ಭಾಷಾ ವಿಭಾಗವು ಆಯೋಜಿಸಿದ "ಭಾಷಾ ಅನೇಕ್, ಭಾವ ಏಕ್" ಎಂಬ ಕಾರ್ಯಕ್ರಮ ನಡೆಯಿತು. ವಿವಿಧ ಭಾಷೆಗಳ ಕೆಲವು ಸರಳ ಪದಗಳನ್ನು ಪರಿಚಯಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಿರುವುದಾಗಿ ಪ್ರಾಂಶುಪಾಲರಾದ ಶ್ರೀ ಕೃಷ್ಣ ಪ್ರಸಾದ್ ಅವರು ಪ್ರಸ್ತಾವನೆಯಲ್ಲಿ ತಿಳಿಸಿದರು. ಆಡಳಿತ ಮಂಡಳಿಯ ಸದಸ್ಯರಾದ ಕಶೆಕೋಡಿ ಶ್ರೀ ಸೂರ್ಯನಾರಾಯಣ ಭಟ್ ಅಧ್ಯಕ್ಷತೆ ವಹಿಸಿದ್ದರು, ಕರಾಡ ಭಾಷೆಯಲ್ಲಿ ಕಥೆ ಹೇಳಿ ನಂತರ ವಿವಿಧ ಭಾಷೆ, ಸಂಸ್ಕೃತಿಗಳನ್ನು ಹೊಂದಿದ ಭಾರತದೇಶದ ವಿವಿಧತೆಯಲ್ಲಿ ಏಕತೆ ಎಂಬ ಸಂದೇಶವನ್ನು ತಿಳಿಸಿದ ಶ್ರೀ ಸುಬ್ರಹ್ಮಣ್ಯ ಭಾರತೀಯವರ ವಿಚಾರವಾಗಿ ಮಾತನಾಡಿದರು. 12 ವಿದ್ಯಾರ್ಥಿಗಳು ತಮ್ಮ ಮಾತೃಭಾಷೆಗಳಲ್ಲಿ (ಕನ್ನಡ, ತುಳು, ಕೊಂಕಣಿ, ಮರಾಠಿ, ಸಂಸ್ಕೃತ, ಹವ್ಯಕ, ತಮಿಳು, ತೆಲುಗು ಇತ್ಯಾದಿ) 'ಬಾಯಾರಿದ ಕಾಗೆಯ ಕಥೆಯನ್ನು ಹೇಳಿದರು. ದ್ವಿತೀಯ ವಾಣಿಜ್ಯ ವಿದ್ಯಾರ್ಥಿನಿ ಹುಲಗಮ್ಮ ಉತ್ತರ ಕರ್ನಾಟಕ ಕನ್ನಡದಲ್ಲಿ ನಿರೂಪಣೆ, ಅಂತಿಮ ಬಿ ಸಿ ಎ ವಿದ್ಯಾರ್ಥಿ ರಚನ್ ಅರೆ ಭಾಷೆಯಲ್ಲಿ ಸ್ವಾಗತ ಹಾಗೂ ದ್ವಿತೀಯ ಬಿ ಎ ವಿದ್ಯಾರ್ಥಿನಿ ಕು. ಪದ್ಮಶ್ರೀ ಕೋಟ ಕನ್ನಡದಲ್ಲಿ ವಂದನಾರ್ಪಣೆ ಸಲ್ಲಿಸಿದರು.

**ಏಡ್ಸ್‌ನ ಜಾಗೃತಿ ಕಾರ್ಯಕ್ರಮ 19.12.2023**

ರಾಷ್ಟ್ರೀಯ ಸೇವಾ ಯೋಜನೆ ಮತ್ತು ರೆಡ್ ರಿಬ್ಬನ್ ಕ್ಲಬ್ಬಿನ ವತಿಯಿಂದ ಏಡ್ಸ್ ಜಾಗೃತಿ ಕಾರ್ಯಕ್ರಮ ನಡೆಯಿತು. ಬಾ.ಪ್ರಾ.ಆ.ಕೇಂದ್ರದ ವೈದ್ಯಾಧಿಕಾರಿಯಾಗಿರುವ ಡಾ. ರೋಶನಿ ಪೂಂಜ ಏಡ್ಸ್ ರೋಗದ ವಿವಿಧ ಆಯಾಮಗಳನ್ನು ತಿಳಿಸಿಕೊಟ್ಟರು. ಹಾಗೂ ರೋಗವನ್ನು ಗುಣಪಡಿಸುವ ಉಪಾಯಗಳನ್ನ ತಿಳಿಹೇಳಿದರು. .ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗಾಗಿ ಪ್ರತಿ ವಾರ ನಡೆಸುವ ರಸಪ್ರಶ್ನೆಯ ವಿಜೇತರನ್ನು ಗುರುತಿಸಿ ನಗದು ಬಹುಮಾನ ಮತ್ತು ಪ್ರಮಾಣ ಪತ್ರ ವಿತರಿಸಲಾಯಿತು.

**ಅಂತರ್ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 22.12.2023**

ಮಂಗಳೂರು ವಿ.ವಿ.ಮಟ್ಟದ ಅಂತರ್ ಕಾಲೇಜ್ ಸಂಗೀತ ಸ್ಪರ್ಧೆಯು ಆಳ್ವಾಸ್ ಕಾಲೇಜಿನಲ್ಲಿ ನಡೆದಿದ್ದು ಶಾಸ್ತ್ರೀಯ ಸಂಗೀತದಲ್ಲಿ ಶರಣ್ಯಶ್ರೀ ಪ್ರಥಮ ಬಿಕಾಂ ಮತ್ತು ಲಘು ಸಂಗೀತದಲ್ಲಿ ಪದ್ಮಶ್ರೀ ದ್ವಿತೀಯ ಬಿ.ಎ ಇವರು ಭಾಗವಹಿಸಿದ್ದಾರೆ.

**ಅಂತರ್ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ 26.12.2023**

26/12/2023 ರಂದು ಮಂಗಳೂರು ವಿಶ್ವ ವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆ"ರಂಗತರಂಗ" ಸಂತ ಮೇರಿ ಮಹಾವಿದ್ಯಾಲಯದಲ್ಲಿ ನಡೆದಿದ್ದು, ವಿದ್ಯಾರ್ಥಿಗಳಾದ (Mime Show) ದೀಕ್ಷಿತ್, ಶಿವಕುಮಾರ್, ನಿಖಿಲ್, ಯತೀಶ್, ಶಶಾಂಕ್, ಭುವನ್. (One Act play) ವಿಸ್ಮಿತ, ರಕ್ಷಿತಾ ಕೆ, ಅನ್ನಪೂರ್ಣ, ದಿವ್ಯಶ್ರೀ, ಮನ್ವಿತಾ, ಅಶ್ರಿತಾ, ಪುನೀತ್, ಪವನಕುಮಾರ ಇವರು ಭಾಗವಹಿಸಿದ್ದರು. ಇವರಿಗೆ ಸಹಾಯಕರಾಗಿ ಹರ್ಷಿತ್,ಕೌಶಿಕ್, ಅಖಿಲೇಶ್ ಜೈನ ಇವರು ಭಾಗವಹಿಸಿದರು.ಇವರೊಂದಿಗೆ ಗ್ರಂಥಪಾಲಕಿ ಸಹನಾ ಮಾತಾಜಿ ಉಪಸ್ಥಿತರಿದ್ದರು.

**ತಾಲೂಕು ಮಟ್ಟದ ಬಹುಭಾಷಾ ಕವಿಗೋಷ್ಠಿ 27.12.23**





ದ.ಕ.ಜಿ.ಸಾಹಿತ್ಯ ಪರಿಷತ್ ಪುತ್ತೂರು ತಾಲೂಕು ಘಟಕ, ವಿವೇಕಾನಂದ ಬಿ.ಎಡ್ ಕಾಲೇಜು ತೆಂಕಿಲ ಪುತ್ತೂರು, ವಿದ್ಯಾಭಾರತಿ ಉಚ್ಚ ಶಿಕ್ಷಾ ಸಂಸ್ಥಾನ- ಕರ್ನಾಟಕ, ರೇಡಿಯೋ ಪಾಂಚಜನ್ಯ 90.8 ಎಫ್.ಎಂ. ಪುತ್ತೂರು ಇದರ ಸಂಯುಕ್ತ ಆಶ್ರಯದಲ್ಲಿ ಭಾರತೀಯ ಭಾಷಾ ಉತ್ಸವದ ಪ್ರಯುಕ್ತ ತಾಲೂಕು ಮಟ್ಟದ ಬಹುಭಾಷಾ ಕವಿಗೋಷ್ಠಿ ನಡೆಯಿತು. ಈ ಬಹುಭಾಷಾ ಕವಿಗೋಷ್ಠಿಯಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕಿ ಕು। ಸಂಧ್ಯಾ ಮಾತಾಜಿ ಇವರು (ಕನ್ನಡ ಭಾಷೆಯಲ್ಲಿ)ಹಾಗೂ ಕನ್ನಡ ಉಪನ್ಯಾಸಕಿಯಾದ ಶ್ರೀಮತಿ ರಶ್ಮಿತಾ ಮಾತಾಜಿ ಇವರು (ಅರೆಭಾಸೆ ಕನ್ನಡದಲ್ಲಿ) ಭಾಗವಹಿಸಿ ಕವನ ವಾಚನ ಮಾಡಿರುತ್ತಾರೆ.

**ದೀಕ್ಷಾ ಕಾರ್ಯಕ್ರಮ 28.12.2023**

ಕಲ್ಲಡ್ಕ ಶ್ರೀರಾಮ ಮಂದಿರದಲ್ಲಿ ಫೆಬ್ರವರಿ 22ರಿಂದ 24ರವರೆಗೆ ನಡೆಯುವ ಗಣಪತಿ ಮೂರ್ತಿ ಪ್ರತಿಷ್ಠಾ ಕಾರ್ಯಕ್ರಮದ ಸಂದರ್ಭದಲ್ಲಿ 24ರಂದು ನಡೆಯಲಿರುವ ಶ್ರೀರಾಮ ತಾರಕ ಜಪಯಜ್ಞದ ಪ್ರಯುಕ್ತ ಶ್ರೀರಾಮ ನಾಮ ತಾರಕ ಜಪ ದೀಕ್ಷಾ ಕಾರ್ಯಕ್ರಮ ನಡೆಯಿತು. ಪ್ರಾಂಶುಪಾಲರು ಶ್ರೀ ಕೃಷ್ಣಪ್ರಸಾದ್ ಪ್ರಾಸಾವಿಕ ನುಡಿಗಳನ್ನಾಡಿದರು. ಶ್ರೀ ಕಶೆಕೋಡಿ ಸೂರ್ಯನಾರಾಯಣ ಭಟ್ ಜಪಯಜ್ಞದ ಮಹತ್ವ ಹಾಗೂ ಭವ್ಯ ಮಂದಿರದ ಲೋಕಾರ್ಪಣೆಯ ಹಿನ್ನೆಲೆ ಬಗ್ಗೆ ಮಾತನಾಡಿ, ಎಲ್ಲರಿಗೂ ಶ್ರೀ ರಾಮ ತಾರಕ ಜಪ ದೀಕ್ಷೆಯನ್ನು ಉಪದೇಶಿಸಿದರು. ಶ್ರೀರಾಮ ಮಂದಿರದ ಶ್ರೀ ಸುಜಿತ್ ಕೊಟ್ಟಾರಿ ಮತ್ತು ಶ್ರೀ ಯತಿರಾಜ್ ಶ್ರೀಮಾನ್ ಉಪಸ್ಥಿತರಿದ್ದರು.





**ಶೈಕ್ಷಣಿಕ ಪ್ರವಾಸ 20.12.23 ಮತ್ತು 21.12.23 :** ಪ್ರೌಢಶಾಲಾ ವಿಭಾಗದ ಪ್ರವಾಸದಲ್ಲಿ 45 ವಿದ್ಯಾರ್ಥಿಗಳು ಮತ್ತು 6 ಶಿಕ್ಷಕರು ಶ್ರೀ ಚನ್ನಕೇಶವ ದೇವಾಲಯ ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಕೆ.ಆರ್.ಎಸ್ dam, ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯ, ಸುಖವನ, ವಿಶ್ವಂ ವಸ್ತು ಸಂಗ್ರಹಾಲಯ, ಲೋಕ ರಂಜನ್ ಆಕ್ವಾವರ್ಲ್ಡ್ ಅಂಡರ್ ಜೋನ್ ಅಕ್ವೇ–ರಿಯಂ, ಮೈಸೂರು ಅರಮನೆ, ಶ್ರೀ ಚಾಮರಾಜಿ ಮೃಗಾಲಯ ಪ್ರದೇಶಗಳಿಗೆ ಭೇಟಿ ನೀಡಿದರು.

**ಒಂದು ದಿನದ ಶೈಕ್ಷಣಿಕ ಪ್ರವಾಸ 21–12–2023 :** ಪ್ರೌಢಶಾಲೆಯ 146 ವಿದ್ಯಾರ್ಥಿಗಳು ಮತ್ತು 16 ಶಿಕ್ಷಕರು ಉಚ್ಚಿಲ ಮಹಾಲಕ್ಷ್ಮಿ ದೇವಸ್ಥಾನ, ಮಣಿಪಾಲ ಅನಾಟಮಿ, Hasta Shilpa Heritage Village manipal, ಉದಯವಾಣಿ ಪ್ರೆಸ್, ಶ್ರೀಕೃಷ್ಣ ಮಠ ಉಡುಪಿ, ಬಪ್ಪನಾಡು ದೇವಸ್ಥಾನ ಮತ್ತು ಕಾಪು ಬೀಚ್ ಮುಂತಾದ ಪ್ರದೇಶಗಳಿಗೆ ಈ ವರ್ಷದ ಶೈಕ್ಷಣಿಕ ಪ್ರವಾಸದಲ್ಲಿ ಭಾಗವಹಿಸಿದರು.







**ಶೈಕ್ಷಣಿಕ ಪ್ರವಾಸ ವಿಜ್ಞಾನ ವಿಭಾಗ 15.12.23** ವಿಜ್ಞಾನ ವಿಭಾಗದ ವಿಧ್ಯಾರ್ಥಿಗಳಿಗೆ ವಿಜ್ಞಾನ ಸಂಘದ ವತಿಯಿಂದ ಮೈಸೂರು ಪ್ರವಾಸವನ್ನು ಹಮ್ಮಿಕೊಳ್ಳಲಾಗಿತ್ತು. 111 ವಿಧ್ಯಾರ್ಥಿಗಳು ಭಾಗವಹಿಸಿದ ಈ ಪ್ರವಾಸದಲ್ಲಿ ಮೈಸೂರಿನ ವಿವಿಧ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಲಾಯಿತು. ಈ ಸಂದರ್ಭದಲ್ಲಿ ಉಪನ್ಯಾಸಕಿ ನಂದಾ ಮಾತಾಜಿ, ಸುಭಾಷಿಣಿ ಮಾತಾಜಿ, ಬಾಲಕೃಷ್ಣ ಶ್ರೀಮಾನ್, ಅಕ್ಷಿತಾ ಮಾತಾಜಿ ಇವರುಗಳು ಭಾಗವಹಿಸಿದ್ದರು

**ಶೈಕ್ಷಣಿಕ ಪ್ರವಾಸ ವಾಣಿಜ್ಯ ವಿಭಾಗ 19.12.2023** ರಂದು ವಾಣಿಜ್ಯ ವಿಭಾಗದ 150 ವಿದ್ಯಾರ್ಥಿಗಳು ಕುಶಾಲನಗರ, ಗೋಲ್ಡನ್ ಟೆಂಪಲ್, ದುಬಾರೆ, ನಿಸರ್ಗಧಾಮ, ಮಡಿಕೇರಿ ಮುಂತಾದ ಕಡೆಗಳಿಗೆ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ಕೈಗೊಂಡರು. ಉಪನ್ಯಾಸಕರಾದ ದಿನೇಶ್ ಶ್ರೀಮಾನ್ ,ಅಶೋಕ್ ಕುಮಾರ್, ಪ್ರಶಾಂತ್, ಚೈತನ್ಯ ಮಾತಾಜಿ, ವಿಜೇತ, ಮತ್ತು ಕವಿತಾ. ಇವರು ವ್ಯವಸ್ಥಾಪಕರಾಗಿ ಸಹಕರಿಸಿದರು.

**ಶೈಕ್ಷಣಿಕ ಪ್ರವಾಸ ಕಲಾ ವಿಭಾಗ** :ದಶಂಬರ 19 ಮತ್ತು 20ರಂದು ದ್ವಿತೀಯ ಮತ್ತು ಪ್ರಥಮ ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಮಾನವಿಕ ಸಂಘದ ವತಿಯಿಂದ 2 ದಿನಗಳ ಮೈಸೂರು, ಶ್ರವಣ ಬೆಳಗೊಳ, ಬೇಲೂರು ಮತು ಹಳೇಬೀಡು ಸ್ಥಳಗಳಿಗೆ ಶೈಕ್ಷಣಿಕ ಪ್ರವಾಸವನ್ನು ಹಮ್ಮಿಕೊಳ್ಳಲಾಗಿತ್ತು. 44 ವಿದ್ಯಾರ್ಥಿಗಳು, ಉಪನ್ಯಾಸಕರುಗಳಾದ ಕು. ನೆಯನ, ಶ್ರೀಮತಿ ದೀಪಿಕಾ, ಶ್ರೀ ರಮೇಶ್, ಶ್ರೀ ಮಹೇಂದ್ರ ಹಾಗೂ ಶ್ರೀಮತಿ ಪೂಜಾ ಭಾಗವಹಿಸಿದ್ದರು.


ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

**ಸಾಲ ಸೌಲಭ್ಯಗಳು**

| | |
|---|---|
| ಚಿನ್ನಾಭರಣ ಸಾಲ | 10.5% |
| ಜಾಮೀನು ಸಾಲ | 16% |
| ಅಡವು ಸಾಲ | 13% |
| ವಾಹನ ಸಾಲ | 11.5% |
| ಗೃಹ ನಿರ್ಮಾಣ ಸಾಲ | 11% |

**ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು**

| | |
|---|---|
| 91ದಿನಗಳವರೆಗೆ | 7.5% |
| 92ರಿಂದ 181 ದಿನಗಳು | 8% |
| 182 ರಿಂದ 364 ದಿನಗಳು | 9% |
| 1 ವರ್ಷ ಮತ್ತು ಮೇಲ್ಪಟ್ಟು | 9.5% |

**ಸೌಲಭ್ಯ**

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.



Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

KARKAN/2014/62363
Posted at Kalladka P.O. on 10th and 15th of Every month

Vol. : 10 Issue :8 Rs. 10/-

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.shriramakalladka.in, www.srvk.org E-mail : info@srvk.org


BOOK POST

ಸವಿಧೇ,


Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363